# ರಾಣಿಯ ಅತಿಥಿ ರಶ್ದಿ!

■ ಪ್ರವೀಣ ಕುಲಕರ್ಣಿ

‘ಮಿಡ್‌ನೈಟ್ಸ್ ಚಿಲ್ಡ್ರನ್’ (ನಡುರಾತ್ರಿಯ ಮಕ್ಕಳು) ಕೃತಿಯ ಕುರಿತು ಕೇಳಿದ್ದೀರಲ್ಲವೇ? ಮುಂಬೈಯಲ್ಲಿ ಜನಿಸಿದ, ಬ್ರಿಟಿಷ್–ಅಮೆರಿಕನ್ ಸಾಹಿತಿ ಸಲ್ಮಾನ್ ರಶ್ದಿ ಅವರಿಗೆ ನಾಲ್ಕು ದಶಕಗಳ ಹಿಂದೆಯೇ ಬೂಕರ್ ಪ್ರಶಸ್ತಿ ತಂದುಕೊಟ್ಟ ಕೃತಿ ಇದು. ಈ ಕೃತಿಯಲ್ಲಿ ಭಾರತದ ದೇಶ ವಿಭಜನೆಯ ಕಥೆಯನ್ನು ‘ನಡುರಾತ್ರಿಯ ಮಕ್ಕಳು’ ತುಂಬಾ ಸೊಗಸಾಗಿ ಬಿಚ್ಚಿಡುತ್ತಾರೆ. ವಾಸ್ತವಿಕ ಸಂಗತಿಗೆ ಮಾಂತ್ರಿಕ ಸ್ಪರ್ಶವನ್ನು ಕೊಟ್ಟು ಬರೆಯುವ ರಶ್ದಿ, ಇಂಗ್ಲಿಷ್ ಸಾಹಿತ್ಯದ ‘ಮ್ಯಾಜಿಕ್ ರಿಯಲಿಸಂ’ ಪ್ರಭೇದಕ್ಕೆ ಸೇರಿದವರು. ಇಂತಹ ಸಾಹಿತ್ಯ ಪ್ರಕಾರದಲ್ಲಿ ರಿಯಾಲಿಟಿ ಮತ್ತು ಫ್ಯಾಂಟಸಿ ನಡುವಿನ ರೇಖೆಯೇ ಕಾಣದಂತೆ ಎರಡೂ ವಿಧದ ವಿವರಗಳು ಒಂದಕ್ಕೊಂದು ಆತುಕೊಂಡಿರುತ್ತವೆ. ಈ ಸಾಹಿತ್ಯ ಪ್ರಕಾರದ ಸೆಲೆಬ್ರಿಟಿ ಸಾಹಿತಿ ಈಗ ಮತ್ತೆ ಸುದ್ದಿಯಲ್ಲಿದ್ದಾರೆ. ಇಂಗ್ಲೆಂಡ್‌ನ ರಾಣಿ ಎಲಿಜಬೆತ್ ಅವರ ಜನ್ಮದಿನದಂದು ಗೌರವ ಪಡೆಯುವವರಲ್ಲಿ ಅವರೂ ಒಬ್ಬರಾಗಿದ್ದಾರೆ. ‘ಕಂಪ್ಯಾನಿಯನ್ ಆಫ್ ಹಾನರ್’ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ. ಈ ಹಿಂದೆ ಅವರು ಸಾಹಿತ್ಯದ ‘ರಾಯಲ್ ಸೊಸೈಟಿ’ ಸದಸ್ಯರಾಗುವ ಗೌರವವನ್ನೂ ಪಡೆದಿದ್ದರು. ಇಂಗ್ಲೆಂಡ್‌ನ ಮಹಾನ್ ಲೇಖಕರಲ್ಲಿ ರಶ್ದಿ ಕೂಡ ಒಬ್ಬರು ಎಂದು ‘ಟೈಮ್’ ಪತ್ರಿಕೆ ಹೆಸರಿಸಿತ್ತು.

74ರ ಹರೆಯದ ರಶ್ದಿ ಅವರದು ಬಲು ವರ್ಣರಂಜಿತ ವ್ಯಕ್ತಿತ್ವ. ವಿವಾದಗಳು ಅವರ ಮೈಮೇಲೆ ಮುರಿದುಕೊಂಡು ಬಿದ್ದವೋ ಇಲ್ಲವೇ ಅವರೇ ವಿವಾದವನ್ನು ಮೈಮೇಲೆ ಎಳೆದುಕೊಂಡರೋ ಅಂತೂ ಈ ಸಾಹಿತಿ ವಿವಾದ ಪುರುಷನೂ ಹೌದು. ಮೂವತ್ತು ವರ್ಷಗಳ ಹಿಂದೆ ಅವರು ಬರೆದ ‘ದಿ ಸಟಾನಿಕ್ ವರ್ಸಸ್’ ಕೃತಿ, ಎಂತಹ ವಿವಾದದ ಗಾಳಿ ಎಬ್ಬಿಸಿತ್ತೆಂದರೆ ಇರಾನ್‌ನ ನಾಯಕ ಆಯಾತುಲ್ಲಾ ಖೋಮೈನಿ, ರಶ್ದಿ ಅವರನ್ನು ಕೊಲ್ಲುವಂತೆ ಫತ್ವಾ ಹೊರಡಿಸಿದ್ದ. ಜಗತ್ತಿನ ಹಲವು ಮುಸ್ಲಿಂ ರಾಷ್ಟ್ರಗಳಲ್ಲಿ ರಶ್ದಿ ವಿರುದ್ಧ ಪ್ರತಿಭಟನೆಗಳೂ ನಡೆದಿದ್ದವು!

‘ಕಂಪ್ಯಾನಿಯನ್ ಆಫ್ ಹಾನರ್’ ಎನ್ನುವುದು ಸುಲಭವಾಗಿ ಸಿಗುವ ಗೌರವವಲ್ಲ. ಕಲೆ, ವಿಜ್ಞಾನ, ವೈದ್ಯಕೀಯ ಅಥವಾ ಆಡಳಿತ ಕ್ಷೇತ್ರದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಅನುಪಮ ಸಾಧಕರನ್ನು ಈ ಪದವಿ ಹುಡುಕಿಕೊಂಡು ಹೋಗುತ್ತದೆ. ಇಂಗ್ಲೆಂಡ್‌ನ ಮಾಜಿ ಪ್ರಧಾನಿಗಳಾದ ವಿನ್‌ಸ್ಟನ್ ಚರ್ಚಿಲ್, ಜಾನ್ ಮೇಜರ್, ವಿಜ್ಞಾನಿ ಸ್ಟೀಫನ್ ಹಾಕಿಂಗ್ಸ್ ಅವರಂತಹ ಘಟಾನುಘಟಿಗಳು ಈ ಹಿಂದೆ ಇಂತಹ ಗೌರವ ಪಡೆದಿದ್ದಾರೆ.

ಭಾರತ ಸ್ವಾತಂತ್ರ್ಯ ಪಡೆಯುವ ಹೊಸ್ತಿಲಲ್ಲಿದ್ದಾಗ ಮುಂಬೈಯಲ್ಲಿ (ಆಗಿನ ಬಾಂಬೆ) ಜನಿಸಿದ ರಶ್ದಿ, ಓದಿದ್ದು, ಮುಂಬೈಯ ಕ್ಯಾಥೆಡ್ರಲ್ ಆ್ಯಂಡ್ ಜಾನ್ ಕೆನನ್ ಶಾಲೆ ಮತ್ತು ಇಂಗ್ಲೆಂಡ್‌ನ ರಗ್ಬಿ ಸ್ಕೂಲ್ ಹಾಗೂ ಕೇಂಬ್ರಿಡ್ಜ್‌ನ ಕಿಂಗ್ಸ್ ಕಾಲೇಜಿನಲ್ಲಿ. ಇತಿಹಾಸವನ್ನು ಅವರು ಅಧ್ಯಯನ ಮಾಡಿದ್ದು ಅದೇ ಕಾಲೇಜಿನಲ್ಲಿ. ರಶ್ದಿ ಅವರ ಕುಟುಂಬ ಶಾಶ್ವತವಾಗಿ ಇಂಗ್ಲೆಂಡ್‌ಗೆ ಬಂದು ನೆಲೆಸುವ ಮುನ್ನ ಕೆಲಕಾಲ ಪಾಕಿಸ್ತಾನದಲ್ಲಿ ನೆಲೆಯೂರಿತ್ತು. ಅವರ ತಂದೆ ಅನಿಸ್ ಅಹ್ಮದ್ ಕೇಂಬ್ರಿಡ್ಜ್‌ನಲ್ಲಿ ಓದಿಬಂದ ವಕೀಲರಾಗಿದ್ದರು. ಭಾರತೀಯ ನಾಗರಿಕ ಸೇವೆಗೆ (ಐಸಿಎಸ್) ಸೇರಿದ್ದ ಅವರನ್ನು ವಯಸ್ಸು ತಿದ್ದಿದ ಆಪಾದನೆಯ ಮೇರೆಗೆ ಸೇವೆಯಿಂದ ವಜಾ ಮಾಡಲಾಗಿತ್ತು. ಅವರ ತಾಯಿ ನೆಗಿನ್ ಭಟ್ ಶಿಕ್ಷಕಿಯಾಗಿದ್ದರು.

ಬೂಕರ್ ಪ್ರಶಸ್ತಿ ಪಡೆದ ಕೃತಿಗಳಲ್ಲಿ ‘ಮಿಡ್‌ನೈಟ್ಸ್ ಚಿಲ್ಡ್ರನ್’ ಅತ್ಯಂತ ಶ್ರೇಷ್ಠ ಎಂದು ಎರಡು ಬಾರಿ ಓದುಗರಿಂದ (1993 ಮತ್ತು 2008) ಮೆಚ್ಚುಗೆ ಗಳಿಸಿದೆ. ದೇಶ ವಿಭಜನೆಯಾದಾಗ ರಶ್ದಿ ಹಸುಳೆಯಾಗಿದ್ದರು. ಆದರೆ, ವಿಭಜನೆಯ ನಂತರದ ಪರಿಣಾಮಗಳನ್ನು ಬಾಲಕನಾಗಿ ಅವರು ಕಂಡುಂಡವರು. ಆ ನೆನಪುಗಳು ‘ಮಿಡ್‌ನೈಟ್ಸ್ ಚಿಲ್ಡ್ರನ್’ನಲ್ಲಿ ಹರಳುಗಟ್ಟಿವೆ. ಒಟ್ಟಾರೆ ಹದಿನಾಲ್ಕು ಕಾದಂಬರಿಗಳನ್ನು ಬರೆದಿರುವ ಅವರು, ಪ್ರಬಂಧಗಳನ್ನೂ ಬರೆದಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮಾನವ ಹಕ್ಕುಗಳಿಗಾಗಿ ಅವರು ಧ್ವನಿ ಎತ್ತಿದ್ದು ಜಗತ್ತಿನ ಗಮನ ಸೆಳೆದಿದೆ.

ಯೌವನದಲ್ಲಿ ಇಂಗ್ಲೆಂಡ್‌ನಲ್ಲೇ ಬಾಳಿ ಬದುಕಿದ ಈ ಸಾಹಿತಿ, 2000ರ ನಂತರ ತಮ್ಮ ನೆಲೆಯನ್ನು ಇಂಗ್ಲೆಂಡ್‌ನಿಂದ ಅಮೆರಿಕಕ್ಕೆ ಬದಲಾಯಿಸಿ, ವೃದ್ಧಾಪ್ಯವನ್ನು ಅಲ್ಲಿಯೇ ಕಳೆಯುತ್ತಿದ್ದಾರೆ. ರಶ್ದಿ ಅವರ ಕೃತಿಗಳಂತೆಯೇ ಅವರ ವೈಯಕ್ತಿಕ ಬದುಕಿನ ವಿವರಗಳೂ ಬೆರಗು ಮೂಡಿಸುವಂತಿವೆ. ಅವರು ನಾಲ್ಕು ಬಾರಿ ವಿವಾಹ ಆಗಿದ್ದಾರೆ. ಭಾರತೀಯ ಮೂಲದ ಅಮೆರಿಕನ್ ನಟಿ ಪದ್ಮ ಲಕ್ಷ್ಮಿ ಅವರ ಮೂರನೇ ಪತ್ನಿಯಾಗಿದ್ದರು. ಕಣ್ಣುರೆಪ್ಪೆ ಜೋತುಬೀಳುವ ಸಮಸ್ಯೆಯಿಂದ ಬಳಲಿದ ರಶ್ದಿ, ಸಮಸ್ಯೆಯನ್ನು ಹೋಗಲಾಡಿಸಲು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ‘ನಾನು ಶಸ್ತ್ರಚಿಕಿತ್ಸೆಗೆ ಒಳಗಾಗದಿದ್ದರೆ ನನ್ನ ಕಣ್ಣನ್ನು ತೆರೆಯಲಾಗದೆ ಸದಾ ಮುಚ್ಚಿರಬೇಕಿತ್ತು’ ಎಂದು ಅವರು ಹೇಳಿದ್ದರು. ಸಾಹಿತ್ಯದ ಮೂಲಕ ಇತರರ ಕಣ್ಣು ತೆರೆಸುವ ಕೆಲಸವನ್ನೂ ಅವರು ಮಾಡಿದ್ದಾರೆ ಎನ್ನುವುದು ಅವರ ಅಭಿಮಾನಿಗಳು ಹೇಳುವ ಮಾತು. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65